ಶ್ರೀಯುತರು ನಾಲ್ಕನೆಯ ವಿಧಾನಸಭೆಗೆ ಬೆಳಗಾಂ ಜಿಲ್ಲೆಯ ಬಸವನ ಬಾಗೇವಾಡಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಅಧ್ಯಕ್ಷರಾಗಿ, ಬೆಳಗಾಂ ಕೋ-ಆಪರೇಟೀವ್ ಸ್ಪಿನ್ನಿಂಗ್ ಮಿಲ್ಸ್ ಲಿಮಿಟೆಡ್ ಉಪಾಧ್ಯಕ್ಷರಾಗಿ, ಬೆಳಗಾಂ ಕೆ.ಎಲ್.ಇ. ಸೊಸೈಟಿಯ ಸದಸ್ಯರಾಗಿ, ಬೆಳಗಾಂ ಜಿಲ್ಲೆಯ ಪುರೋಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ.

5) ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎನ್. ಕೆ. ಹುಚ್ಚಪ್ಪನವರು ದಿನಾಂಕ : 31-1-1995ರಂದು ನಿಧನರಾದರು.

ಶ್ರೀಯುತರು ಏಳನೆಯ ವಿಧಾನ ಸಭೆಗೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ಕ್ಷೇತ್ರವನ್ನು ಪ್ರತಿನಿಧಿಸಿದ್ದರು. 33 ವರ್ಷಗಳ ಕಾಲ ನಾಗೇನಹಳ್ಳಿ ಪಂಚಾಯಿತಿ ಅಧ್ಯಕ್ಷರಾಗಿ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಕ್ರಿಯ ಸದಸ್ಯರಾಗಿ, ಹಾಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ ಅಲ್ಲದೆ, ರಾಷ್ಟ್ರೀಕೃತ ಬ್ಯಾಂಕುಗಳ ನಿರ್ದೇಶಕರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ.

6)ನಮ್ಮ ರಾಜ್ಯದ ಪ್ರಸಿದ್ಧ ಸುಗಮ ಸಂಗೀತಗಾರರಾದ ಮೈಸೂರು ಅನಂತಸ್ವಾಮಿಯವರು ದಿನಾಂಕ : 9-1-1995 ರಂದು ನಿಧನರಾದರು.

ಸ್ವತಃ ರಾಗ ಸಂಯೋಜನೆ ಮತ್ತು ಗಾಯನಗಳೆರಡರಲ್ಲೂ ಪ್ರಸಿದ್ಧರಾಗಿದ್ದ ಶ್ರೀಯುತರು ರಾಜರತ್ನ ಅವರ ಕೃತಿಗಳನ್ನು ಪ್ರೊ. ನಿಸಾರ್ ಅಹಮದ್ ಅವರ 'ನಿತ್ಯೋತ್ಸವ' ಹಾಗೂ ಕುವೆಂಪುರವರ 'ಓ ನನ್ನ ಚೇತನ' ಕ್ಕೆ ಧ್ವನಿ ಸುರುಳಿಯನ್ನು ತಂದ ಹೆಗ್ಗಳಿಕೆ ಇವರದು. ರಾಜ್ಯ ಪ್ರಶಸ್ತಿ, ಅಕಾಡಮಿ ಪ್ರಶಸ್ತಿ ಪದಕಗಳು ಇವರನ್ನು ಅರಸಿ ಬಂದಿದ್ದವು. ನಾಡಿನಾದ್ಯಂತ ಸಂಚರಿಸಿ ಕಾರ್ಯಕ್ರಮ ಕೊಟ್ಟಿರುವುದಲ್ಲದೆ, ದೇಶ ವಿದೇಶಗಳಲ್ಲೂ ಕಾರ್ಯಕ್ರಮಗಳನ್ನಿತ್ತು ಸುಗಮ ಸಂಗೀತ ವಲಯದಲ್ಲೊಂದು ವಿಕ್ರಮವನ್ನು ಸೃಷ್ಟಿಸಿರುತ್ತಾರೆ.

7) ಹಿರಿಯ ಪತ್ರಕರ್ತರಾದ ಶ್ರೀ ಬಿ. ನಾರಾಯಣಸ್ವಾಮಿಯವರು ದಿನಾಂಕ : 23-2-1995 ರಂದು ನಿಧನರಾದರು.

ಕನ್ನಡ ಪ್ರಭಾ ದಿನಪತ್ರಿಕೆಯ ಕೋಲಾರ ವಿಭಾಗದ ವರದಿಗಾರರಾಗಿದ್ದ ಶ್ರೀಯುತರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಟನೆಗಾಗಿ, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಸಕ್ರಿಯ ಸದಸ್ಯರಾಗಿ ಹಾಗೂ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಪತ್ರಿಕಾ ರಂಗಕ್ಕೆ ಹಲವಾರು ರೀತಿಯಿಂದ ಸೇವೆ ಸಲ್ಲಿಸಿರುತ್ತಾರೆ.

ಈ ಮೇಲ್ಕಂಡ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ದಿವಂಗತ ಕುಟುಂಬವರ್ಗದವರಿಗೆ ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳು

70 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಿವಿಧ ಇಲಾಖೆಯಲ್ಲಿ ಹಲವಾರು ಹುದ್ದೆಗಳು ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅ) ಹಾಗಿದ್ದಲ್ಲಿ ಅವುಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು.

ಆ) 1) ಬಡ್ತಿಯಿಂದ ತುಂಬಬಹುದಾದ ಹುದ್ದೆಗಳನ್ನು ಬಡ್ತಿ ನೀಡಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

2) ನೇರ ನೇಮಕಾತಿಯ ನಿರ್ಬಂಧವನ್ನು ತೆಗೆದುಹಾಕಲಾಗಿದೆ ಮತ್ತು ಆರ್ಥಿಕ ಮಿತವ್ಯಯ ಆದೇಶಗಳನ್ನು ಅವಶ್ಯವಿದ್ದೆಡೆಯಲ್ಲಿ ಸಡಿಲಗೊಳಿಸಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರವು ಕ್ರಮ ತೆಗೆದುಕೊಳ್ಳುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ಇದು ರಾಜ್ಯದ ಲಕ್ಷಾಂತರ ಯುವಕರ ನಿರುದ್ಯೋಗದ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದಲ್ಲಿ ಪ್ರತಿವರ್ಷವೂ ಕೂಡ ಒಂದೊಂದು ಲಕ್ಷ ಉದ್ಯೋಗಗಳನ್ನು ನಾವು ಸೃಷ್ಟಿ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದರು. ಇವತ್ತೇನು ಪರಿಸ್ಥಿತಿ ಇದೆ ಅಂದರೆ ಎಲ್ಲಾ ಆಸ್ಪತ್ರೆಗಳಲ್ಲಿ ಡಾಕ್ಟರಿಲ್ಲ, ನರ್ಸ್‌ಗಳಿಲ್ಲ, ಆಯಾಗಳು ಕೂಡ ಇಲ್ಲ. ಅನೇಕ ಶಾಲೆಗಳಲ್ಲಿ ಅಧ್ಯಾಪಕರ ಹುದ್ದೆಗಳು ಖಾಲಿ ಇವೆ. ಕೆಇಬಿ ಇಲಾಖೆಯಿಂದ ಲೋಡ್ ಗಟ್ಟಲೆ ಅರ್ಜಿ ತರಿಸಿಕೊಂಡಿದ್ದರು, ಪೋಸ್ಟಲ್ ಆರ್ಡರ್ಸ್ ಸಮೇತ, ಅದರ ಸಂದರ್ಶನ ಇನ್ನೂ ಕೂಡ ಕರೆದಿಲ್ಲ. ದಿನಗೂಲಿ ನೌಕರರೂ ಕೂಡ ಖಾಯಂ ಆಗಲಿಲ್ಲ. ಫಾರೆಸ್ಟ್ ವಾಚರ್‌ಗಳದು ಕೂಡ ಇನ್ನೂ ಖಾಯಂ ಆಗಿಲ್ಲ, ಆ ರಿಕ್ರಾಡ್ಸ್ ಓಪನ್ ಆಗದಿದ್ದರೂ 600 ರೂಪಾಯಿಗಳ ಸಂಬಳಕ್ಕೆ ಕೆಲಸ ಮಾಡುವಂತಹ ಸ್ಥಿತಿ ಇದೆ. ಇದಿಷ್ಟೂ ಇದ್ದರೂ ಈ ರಾಜ್ಯದಲ್ಲಿ ದುಡಿಮೆ ಮಾಡಲು ತಯಾರಿರುವ ಯುವಕರು ಉದ್ಯೋಗವಿಲ್ಲದೆ ಮನೆಗೆ ಮತ್ತು ಸಮಾಜಕ್ಕೆ ಭಾರವಾಗಿದ್ದಾರೆ. ಇಂತಹ ಸಂದರ್ಭದಲ್ಲಿ ನಾನು ಕೇಳುವುದಿಷ್ಟೇ: ಉದ್ಯೋಗ ನಿರ್ಬಂಧ ಕಾಯಿದೆ ಎಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 1987ನೇ ಅಕ್ಟೋಬರ್‌ನಲ್ಲಿ ಇತ್ತು. ಆ ಕಾಯಿದೆಯನ್ನು ಕೆಲವು ಇಲಾಖೆಯಲ್ಲಿ ವಾಪಸ್ ತೆಗೆದಿದ್ದಾರೆ, ಇನ್ನು ಕೆಲವು ಇಲಾಖೆಯಲ್ಲಿ ವಾಪಸ್ ತೆಗೆದಿಲ್ಲ. ಈ ಕಾಯಿದೆಯನ್ನು ಸಂಪೂರ್ಣ ವಾಪಸ್ ತೆಗೆದುಕೊಳ್ಳುತ್ತೀರಾ - ಇದು ಮೊದಲನೇ ಪ್ರಶ್ನೆ.

ಎರಡನೆಯದು Budget allocated employment ನನಗೆ ಗೊತ್ತಿರುವ ಪ್ರಕಾರ ಸುಮಾರು ಎಪ್ಪತ್ತು ಸಾವಿರ ಹುದ್ದೆಗಳು ಇವತ್ತು ಖಾಲಿ ಬಿದ್ದಿವೆ. ಅದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಮತ್ತು ಈ ಮೀಸಲಾತಿ ನಿಯಮವನ್ನು ಏನು ಈಗಾಗಲೇ ತೀರ್ಮಾನಮಾಡಿದ್ದಾರೆ, ಆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ಗೆ ಈಗಾಗಲೇ ಹೋಗಿದೆಯೇ? ಈ ಮೂರು ಪ್ರಶ್ನೆಗಳನ್ನು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈಗ ಇಲಾಖೆಗಳಲ್ಲಿ ಖಾಲಿ ಇರತಕ್ಕಂಥ ಎಲ್ಲಾ ಹುದ್ದೆಗಳು 84,022. 94-95ನೇ ಸಾಲಿನ ಬಜೆಟ್ ಅಪೆಂಡಿಕ್ಸ್ 'ಬ' ಪ್ರಕಾರ, ಸರ್ಕಾರದ ಇಲಾಖೆಗಳಲ್ಲಿ ಹಾಗೂ ಜಿಲ್ಲಾ ಪಂಚಾಯಿತಿ ಒಳಗೊಂಡಂತೆ ಒಟ್ಟು ಹುದ್ದೆಗಳ ಸಂಖ್ಯೆ 6,12,638. ಅದರಲ್ಲಿ ಖಾಲಿ ಇರುವುದು 84,022. ನಾವು ಪ್ರತಿ ವರ್ಷ ಒಂದು ಲಕ್ಷ ಹುದ್ದೆಯನ್ನು ಸೃಷ್ಟಿಮಾಡುತ್ತೇವೆ ಎಂದು ಹೇಳಿಲ್ಲ. ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇವೆ. ಈಗ 8-11-93ರಲ್ಲಿ ನೇರ ನೇಮಕಾತಿಯಮ್ನ ಸ್ಥಗಿತಗೊಳಿಸಿರುವುದರಿಂದ

ಆಗಿಂದಾಗ್ಗೆ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ ಸಿ 21. 93, ದಿ : 8-11-9೩ ಹಿಂದಕ್ಕೆ ತೆಗೆದುಕೊಳ್ಳಲಾಗಿದೆ. ನಾವು ಬರುವುದಕ್ಕೆ ಮುಂಚೆಯೇ ಕೆಲವು ಇಲಾಖೆಗಳ ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಉದಾಹರಣೆಗೆ ಗೆಜೆಟೆಡ್ ಪ್ರೊಬೆಷನರ್ಸ್, ಶೀಘ್ರಲಿಪಿಗಾರರ ಬೆರಳಚ್ಚುಗಾರರು ವಿವಿಧ ಇಲಾಖೆಗಳಲ್ಲೂ ರಿಕ್ತ ಸ್ಥಾನಗಳನ್ನು ಬಿಡುಗಡೆ ಮಾಡಲಾಗ ಎಂದು ಹೇಳಿದ್ದಾರೆ. ಹಿರಿಯ ಸದಸ್ಯರಾದ ಶ್ರೀಮಾನ್ ಈಶ್ವರಪ್ಪನವರು ಕೇಳ ಪ್ರಶ್ನೆ ದಿನಗೂಲಿ ನೌಕರರು ಮತ್ತು ಬೇರೆ ಬೇರೆ ಅರೆಕಾಲಿನ ಉಪನ್ಯಾಸಕರ ಅದೆಲ್ಲ ಇದರ ವ್ಯಾಪ್ತಿಯಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಒಂ ಖಾಲಿ ಹುದ್ದೆಗಳು ಎಷ್ಟಿವೆ ಎಂದು ಹೇಳಿದ್ದೇನೆ. ಅದರ ಜೊತೆಗೆ ಸರ್ಕಾ ಮೀಸಲಾತಿ ಬಗ್ಗೆ ಏನಾದರೂ ಎಲ್ಲಾ ಕಡೆ ತಿಳಿಸಿದ್ದೀರಾ ಎಂದು ಪ್ರಶ್ನೆ ಕೇಳಿದ್ರ ಇದು ಕರ್ನಾಟಕದ ಗೆಜೆಟಿಯರ್. ಇದನ್ನೇನು ನಾನು ತಿಳಿಸಬೇಕಾಗಿಲ್ಲ. it will to every office. ಇದರಲ್ಲಿ ಹೇಳಿದ್ದೇವೆ. ಸುಪ್ರೀಂ ಕೋರ್ಟ್ 50 ಪರ್‌ಸೆಂಟ ತಾತ್ಕಾಲಿಕ ಮೀಸಲಾತಿಯನ್ನು ನಿಗದಿ ಮಾಡಿದ್ದಾರೆ. ಇದ್ದು ರಾಜಕೀಯವಾದದ ನಿರ್ಣಯ. ವಿದ್ಯಾ ಸೌಲಭ್ಯವನ್ನು ಕೊಡುವುದಕ್ಕೆ ಹಿಂದಿನ ಸರ್ಕಾರವೇ ನಿರ್ಣಯ ಮಾಡಿತ್ತು. ಇದು ಸರ್ಕಾರಿ ಹುದ್ದೆಗಳ ಬಗ್ಗೆ ನಾವು ನಿರ್ಣಯ ಮಾಡಿರುವುದ ಒಂದು, ಎಲ್ಲಾ ಗೆಜೆಟ್ ನೋಟಿಫಿಕೇಷನ್ ಆಗಿರುವುದರಿಂದ ಪ್ರತ್ಯೇಕವಾಗಿ ನಾವ ಎಂಪ್ಲಾಯ್ ಮೆಂಟ್ ಎಕ್ಸ್ ಛೇಂಜ್‌ಗೆ ಕಳುಹಿಸಬೇಕಾಗಿಲ್ಲ. Every office will g the Gazette Notification. ಅದರ ಜೊತೆಗೆ ಮಾನ್ಯ ಸದಸ್ಯರು ಒಂದು ಮಾತನ ಹೇಳಿದರು, ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ ಎಂದು. ಇದರ ಬಗ್ಗೆ ಪ್ರ ಏನೆಂದರೆ, ಎಲ್ಲಾ ಜಿಲ್ಲೆಗಳಲ್ಲಿ ಹುದ್ದೆಗಳು ಖಾಲಿ ಏನು ಇವೆ, ಆ ಹುದ್ದೆಗಳನ್ನ ತುಂಬಬೇಕು ಎಂದು ಹೇಳಿ ಡೆಪ್ಯುಟಿ ಕಮೀಷನರ್ಸ್, ಜಿಲ್ಲಾಪಂಚಾಯಿತಿಯ ಮುಖ್ಯಸ್ಥರಾಗಿರುವುದರಿಂದ, ಆಡಳಿತಾಧಿಕಾರಿಯಾಗಿರುವುದರಿಂದ, ಅವರಿಗೆ ತಿಳಿಸಿ ಅವರಿಂದ ನಾವು ಪಟ್ಟಿಯನ್ನು ತರಿಸಿ ಸುಮಾರು 250-252 ಹುದ್ದೆಗಳನ್ನು ತಾತ್ಕಾಲಿಕವಾಗ ತುಂಬುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆಸ್ಪತ್ರೆಗಳಲ್ಲಿ ಖಾಲಿ ಇರಬಾರದು ಎಂದು ಎರಡು ವಾರವೋ ಮೂರು ವಾರವೋ ಹಿಂದೆ ನೇಮಕಾತಿ ಮಾಡಿದ್ದೇವೆ. ಒಂದ ವಾರದಲ್ಲಿ ಅವರು ಹೋಗಿ ಪೋಸ್ಟಿಂಗ್ ಆಗಿರುವ ಕಡೆ ಸೇರಿಕೊಳ್ಳಬೇಕು ಎಂದು ಹೇಳಿದ್ದೇವೆ. ಅದು ಅಷ್ಟೇ ಅಲ್ಲ, ಇನ್ನು ಒಂದು ಹೆಜ್ಜೆ ಮುಂದು ಹೋಗ ಯಾರಾದರೂ ಹೋಗದೇ ಇದ್ದರೆ, ಸ್ಥಳೀಯವಾಗಿ ಸಿಗುವ ಯಾವುದೇ ಎಂ.ಬಿ.ಬಿ.ಎಸ್. ಕ್ವಾಲಿಫಿಕೇಷನ್ ಇರುವ ಒಬ್ಬ ವೈದ್ಯ ಸಿಕ್ಕಿದರೆ, ಡೆಪ್ಯೂಟಿ ಕಮೀಷನರ್ ರವರು ತಾತ್ಕಾಲಿಕವಾಗಿ ಒಂದು ಆರ್ಡರನ್ನು ಕೊಡುವುದು, ಅದರಲ್ಲಿ ಮಾತ್ರ ಒಂದು ಷರತ್ತನ್ನು ಹಾಕಬೇಕು. ಆ ಆರ್ಡರನ್ನು ಯಾವಾಗ ಬೇಕಾದರೂ ಹಿಂದಕ್ಕೆ ತೆಗೆದುಕೊಳ್ಳಬಹುದು ಕಾರಣವಿಷ್ಟೇ. ಸುಪ್ರೀಂ ಕೋರ್ಟ್ ತನ್ನ ಅಂತಿಮ ನಿರ್ಣಯವನ್ನು ಕೊಟ್ಟಮೇಲೆ ಈ ಮೀಸಲಾತಿಯನ್ನು ಕೆಲವು ಬದಲಾವಣೆಗಳಾಗುವುದರಿಂದ ಟೆಂಪೊರರಿಯಾಗಿ ಅಪಾಯಿಂಟ್ ಮಾಡಿ ಎಂದು ಹೇಳಿದ್ದೇವೆ. ಅದರಲ್ಲಿ ಮೊದಲನೆಯ ಆದ್ಯತೆ ಷೆಡ್ಯೂಲ್ಡ್ ಕಾಸ್ಟ್‌ಗೆ, ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಕೊಡಬೇಕು ಎಂದು ಮಾಡಿದ್ದೇವೆ. ಮೊದಲನೆಯ ಆದ್ಯತೆ ಅದು ಎಷ್ಟು ಬೇಕಾದರೂ ಇರಲಿ ಕೊಡಿ, ಅಭ್ಯರ್ಥಿಗಳು ಸಿಗಲಿಲ್ಲ ಎಂದರೆ ಬ್ಯಾಕ್ ವಾರ್ಡ್ ಕ್ಲಾಸ್‌ಗೆ ಕೊಡಿ, ಅವರು ಸಿಗಲಿಲ್ಲ ಎಂದರೆ ಬೇರೆ ಸಮಾಜದವರಿಗೆ ಮಾಡಿ ಎಂದು, ನಾವು ಈಗಾಗಲೇ ನಿರ್ದಿಷ್ಟವಾಗಿ ಹೇಳಿದ್ದೇವೆ. ಇದು ಒಂದು ಭಾಗವಾಯಿತು. ಬೇರೆ ಎಲ್ಲಾ ಇಲಾಖೆಗಳಲ್ಲಿ ರೋಸ್ಟರ ಪ್ರಕಾರ ತುಂಬತಕ್ಕಂಥದ್ದರ ಬಗ್ಗೆ ಒಂದು ಸಮಸ್ಯೆ ಇದೆ. ಈ 50 ಪರ್‌ಸೆಂಟ್‌ಗೆ ಅನುಗುಣವಾಗಿ ಮತ್ತೆ ರೋಸ್ಟರ್ ಬದಲಾವಣೆಯನ್ನು ಮಾಡಬೇಕಾಗುತ್ತದೆ. ಅದೊಂದು ನಿರ್ಣಯವಾಗಿಲ್ಲ. ಅದರ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿಗೆ ಒಂದು ವರದಿ ಕೊಡಿ ಎಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಸುಪ್ರೀಂ ಕೋರ್ಟಿನಲ್ಲಿ ಫುಲ್ ಬೆಂಚ್‌ನಲ್ಲಿ ಇನ್ನು ಅದು ರೆಗ್ಯುಲರೈಜೇಷನ್ ಬಗ್ಗೆ ನಿರ್ಣಯವಾಗಿಲ್ಲ. ಅದು ಫುಲ್ ಬೆಂಚ್ ಮುಂದೆ ನಿರ್ಣಯವಾದ ಮೇಲೆ ಯಾವ ರೀತಿಯಾಗಿ ಮಾಡಬೇಕು ಎಂದು ಹೇಳಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ಈಗ ಏನಾಗಿದೆ ಎಂದರೆ ಸುಮಾರು ಹತ್ತಾರು ವರ್ಷದಲ್ಲಿ ಒಂದೇ ವರ್ಷ, ಈ ವರ್ಷ ಎಂದು ನಾನು ಹೇಳುವುದಿಲ್ಲ, ತಮ್ಮ ಕಾಲದಿಂದ ಮತ್ತೆ ನಮ್ಮ ಕಾಲದಿಂದ ಕಂಟಿನ್ಯೂ ಆಗಿ ಈ ಟೆಂಪೊರರಿ ಪೋಸ್ಟ್ ಎಂದು ಹೇಳಿ ಸಾಕಷ್ಟು ಜನರನ್ನು ಪಿಡಬ್ಲ್ಯೂಡಿ, ಇರಿಗೇಷನ್, ಹಾರ್ಟಿಕಲ್ಚರ್, ಸಿರಿಕಲ್ಚರ್ ಡಿಪಾರ್ಟ್‌ಮೆಂಟ್, ಈ ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಟೆಂಪೊರರಿ ಎಂದು ಹೇಳಿ ತೆಗೆದುಕೊಂಡಿದ್ದಾರೆ. ಡೇಲಿವೇಜಸ್ ಮೇಲೆ ತೆಗೆದುಕೊಂಡು ಸಾವಿರಾರು ಸಂಖ್ಯೆಯಲ್ಲಿ ರೆಗ್ಯುಲರೈಜ್ ಮಾಡಿದ್ದಾರೆ ನೀವು ಕ್ಯಾಬಿನೆಟ್ ನೋಟ್ ಕೂಡ ನೋಡಬಹುದು. ಅದರ ಬಗ್ಗೆ ನಾನು ನೋಟಿಸ್ಸು ಮಾಡಿದ್ದೇನೆ. ಅದನ್ನು ನೀವು ಈ ರೀತಿಯಾಗಿ ರೆಗ್ಯುಲರೈಜ್ ಮಾಡುತ್ತಾ ಹೋದರೆ ರೋಸ್ಟರ್ ಸಿಸ್ಟಂಗೆ ಹೊಡೆತ ಬೀಳುತ್ತದೆ. ಒಂದು ಕಡೆ ನೀವು ರಿಸರ್ವೇಷನ್ ಕೊಡುತ್ತೇವೆ ಎಂದು ಹೇಳಿಕೊಂಡು ಹೋಗುತ್ತಿದ್ದೀರಿ. ಇನ್ನೊಂದು ಕಡೆ ಇದನ್ನು ರೆಗ್ಯುಲರೈಜ್ ಮಾಡುತ್ತಿದ್ದೀರಿ in the name of Supreme Court Order ಎನ್ನತಕ್ಕಂಥದ್ದು ನಾವು ಪದೇ ಪದೇ ಹೇಳಿಕೊಳ್ಳುತ್ತಾ ಬಂದಿದ್ದೇವೆ. ಮತ್ತೆ ಅದಕ್ಕೆ ಎಲ್ಲರೂ ಕೂಡ ಸಮಾಧಾನ ವ್ಯಕ್ತಪಡಿಸಿದ್ದು ಏನೆಂದರೆ ಇದು ಕಂಪಾಸನೇಟ್ ಗ್ರೌಂಡ್ ಮೇಲೆ ನಾವು ಮಾಡೋಣ, ಇದೊಂದು ರೀತಿ ಹೋಗಲಿ, ಎಂದು ಹೇಳಿ ಪ್ರತಿಯೊಂದು ಡಿಪಾರ್ಟ್‌ಮೆಂಟ್ ರೆಗ್ಯುಲರೈಜೇಷನ್ ಬಂದಾಗ ಇದೇ ಒಂದು ನೆಪ ಎಂದು ಹೇಳಿಕೊಂಡು ರೆಗ್ಯುಲರೈಜ್ ಮಾಡಿಕೊಂಡು ಹೋಗುತ್ತಿದ್ದಾರೆ. ಅದರಿಂದ ಮುಖ್ಯವಾಗಿ ಈ ಎಸ್.ಸಿ/ಎಸ್.ಟಿ.ಯವರಿಗೆ, ಬ್ಯಾಕ್ ವಾರ್ಡ್ ಕ್ಲಾಸ್‌ನವರಿಗೆ ಸಿಗತಕ್ಕಂಥ ಏನು ಹುದ್ದೆಗಳು ಸಿಗಬೇಕಾಗಿತ್ತು, ಅದು ಸಿಕ್ಕಿಲ್ಲ. ಅದಕ್ಕೆ ಬ್ಯಾಕ್ ಲಾಗ್ ವೇಕೆನ್ಸಿ ಎಂದು ನೀವು ತೆಗೆದುಕೊಂಡು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ ಎಂದು ಹೇಳಿ ನಮ್ಮ ವಾದ ಮೊದಲಿನಿಂದಲೂ ಇದೆ. ಹಿಂದೆ ನಾವು ಕೂಡ ಒಂದು ಸಾರಿ ಮಾಡಿ ನೋಡಿದ್ದೇವೆ. ಅದೇ ರೀತಿಯಾಗಿ ತಾವು ಇವತ್ತು ಕೂಡ ಒಂದು ಆಶ್ವಾಸನೆಯನ್ನು ಕೊಡಬೇಕು, ಈ ಬ್ಯಾಕ್ ಲ್ಯಾಗ್ ವೇಕೆನ್ಸೀಸ್‌ಗೆ ಎಸ್.ಸಿ ಎಸ್.ಟಿಯವರಿಗೆ ನೇರವಾಗಿ ನೀವು ಒಂದು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿದರೆ ಎಷ್ಟು ಹುದ್ದೆಗಳು ಅವರಿಗೆ ಕೊಡುವುದು ಇದೆ, ಅಥವಾ ಅರ್ಹರು ಇದ್ದರೆ ಅದನ್ನು ನೇರವಾಗಿ ಮಾಡಬಹುದು. ಅದನ್ನು ಏನಾದರೂ ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಂಡು ಈ ಬ್ಯಾಕ್ ಲಾಗ್ ವೇಕೆನ್ಸಿಯನ್ನು ಭರ್ತಿ ಮಾಡುತ್ತೀರೋ ಹೇಗೆ?

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಖರ್ಗೆಯವರು ಹೇಳಿದಂಥ ವಿಷಯದಲ್ಲಿ ಈಗ ಟೆಂಪೊರರಿಯಾಗಿ ಅಪಾಯಿಂಟ್ ಮಾಡುವುದಾಗಲೀ, ಪರ್ಮನೆಂಟ್ ಅಪಾಯಿಂಟ್ ಮಾಡುವುದಾಗಲೀ ಇನ್ನೂ ಈ ಸರ್ಕಾರ ಇದಕ್ಕೆ ಸೂಚನೆ ಕೊಟ್ಟಿಲ್ಲ. ವೈದ್ಯಕೀಯ ಹುದ್ದೆಗಳು ಖಾಲಿ ಬಿದ್ದಿರುವುದರಿಂದ, ಅನೇಕ ಕಡೆ ರೋಗಿಗಳಿಗೆ ತೊಂದರೆಯಾಗುತ್ತದೆ ಎಂದು ತಿಳಿದು ಮಾಡಿದ್ದೇವೆ. ಅದರಲ್ಲೂ ಷೆಡ್ಯೂಲ್ಡ್ ಕಾಸ್ಟ್‌ಗೆ ಮೊದಲನೇಯ ಆದ್ಯತೆ ಕೊಡಬೇಕು ಎಂದು ಹೇಳಿದ್ದೇವೆ, ಅವರು ಇಲ್ಲ ಎಂದು ಹೇಳಿದರೆ ಎರಡನೇಯ ಆದ್ಯತೆ ಬ್ಯಾಕ್ ವಾರ್ಡ್ ಕ್ಲಾಸ್‌ಗೆ ಕೊಡಬೇಕು. ಅದೂ ಇಲ್ಲ ಎಂದರೆ ಆಗ ನೀವು ಲೋಕಲ್ ಪತ್ರಿಕೆಗಳಲ್ಲಿ ಜಾಹಿರಾತು ಮಾಡಿ ಎಂದು ಹೇಳಿದ್ದೇವೆ. ಇಲ್ಲಿ ಹುದ್ದೆಗಳು ತುಂಬುವುದಕ್ಕೆ ವಿವಿಧ ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸು ಏನು ಬಂದಿದ್ದವು. ಅವುಗಳನ್ನು ಕೂಡ ಟೆಂಪೊರರಿ ಆಗಿ ತುಂಬುವಾಗ ಷರತ್ತುಗಳನ್ನು ಹಾಕಿದ್ದೇವೆ. ಅವರಿಗೆ ಹೋಗಿ

ಸೇರಿಕೊಳ್ಳುವುದಕ್ಕೆ ಒಂದು ವಾರ ಟೈಮ್ ಕೊಟ್ಟಿದ್ದೇವೆ. ಆ ಒಂದು ಇಲಾಖೆಯಲ್ಲಿ ಮಾತ್ರ ಈ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅನೇಕ ಕಡೆ ಡಾಕ್ಟರ್ಸ್ ಇಲ್ಲ. ಅದರಿಂದ ರೋಗಿಗಳಿಗೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಿ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಈ ನಿರ್ಣಯವನ್ನು ತೆಗೆದುಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಡಾಕ್ಟರಿಗೆ ಸಂಬಂಧಪಟ್ಟಿದ್ದುದು ಅಲ್ಲ, Whether it has come to the notice of the Government that there are many vacant posts in the various Departments of the State Government? ಆ ದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಮೊದಲೇ ಹೇಳಿದ್ದೇನೆ. ಯಾವ ಹುದ್ದೆಗಳನ್ನೂ ನಾವು ಭರ್ತಿ ಮಾಡುವುದಕ್ಕೆ ಹೇಳಿಲ್ಲ, ಡಾಕ್ಟರ್ಸ್‌ಗೆ ಮಾತ್ರ ಹೇಳಿದ್ದೇನೆ. ಬಾಕಿ ಹುದ್ದೆಗಳ ಬಗ್ಗೆ ನೀವು ಹೇಳಿದ ಎಲ್ಲಾ ಕ್ರಮಗಳನ್ನು ನಾವು ಅನುಸರಿಸುವುದಕ್ಕೆ ಸಿದ್ಧರಿದ್ದೇವೆ. ಹಿಂದೆ ದಿನಗೂಲಿ ನೌಕರರ ವಿಷಯ ಏನಿದೆ ಅಲ್ಲಿ ಎಲ್ಲಾ ಹುದ್ದೆಗಳಿಗೂ ಅನ್ವಯವಾಗುವುದಿಲ್ಲ, ಇಂಜಿನಿಯರ್ ಇರಬಹುದು, ಕ್ಲಾಸ್-1ಇರಬಹುದು, ಎರಡನೇ-ವರ್ಗ ಇರಬಹುದು, ಟೆಕ್ನಿಕಲ್ ಪೋಸ್ಟ್ ಇರಬಹುದು, ಲೆಕ್ಚರರ್ಸ್ ಇರಬಹುದು. ಅದೆಲ್ಲ ಇದಕ್ಕೆ ಬರುವುದಿಲ್ಲ, ಫಾರೆಸ್ಟ್ ಇಲಾಖೆ ಇರಬಹುದು, ಪಿ.ಡಬ್ಲ್ಯು.ಡಿ. ಇರಬಹುದು. ಬೇರೆ ಬೇರೆ ಇಲಾಖೆಗಳಲ್ಲಿ ಇರಬಹುದು, ದಿನಗೂಲಿ ನೌಕರರು ಇರಬಹುದು. 1974ರಲ್ಲಿ ಸುಪ್ರೀಂ ಕೋರ್ಟ್ ನಿರ್ಣಯವಾದ ಮೇಲೆ ಆ ನಿರ್ಣಯಕ್ಕೆ ಅನುಗುಣವಾಗಿ ಆ ಹುದ್ದೆಗಳನ್ನು ತುಂಬುವುದಕ್ಕೆ ಕೆಲವು ಶರತ್ತುಗಳನ್ನು ಹಾಕಿದ್ದೇವೆ. 10 ರಿಂದ 12 ವರ್ಷ ಸೇವೆ ಪೂರ್ತಿ ಆಗಿದ್ದರೆ ಅವರಿಗೆ ಖಾಯಂ ಮಾಡತಕ್ಕಂಥಾದ್ದು, ಅದು 4ನೇ ದರ್ಜೆ ಹುದ್ದೆ ಇರಬಹುದು ಎಂದು ಕಾಣುತ್ತದೆ. ನಾನು ನಿಮಗೆ ಯಾವ ಯಾವ ಹುದ್ದೆಗಳು ಖಾಯಂ ಆಗಿವೆ, ಅನ್ನುವುದರ ಬಗ್ಗೆ ಪ್ರತ್ಯೇಕವಾಗಿ ಬೇಕಾದರೇ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 60 ಸಾವಿರ ಖಾಲಿ ಹುದ್ದೆಗಳಿದ್ದು ನಾವು ನೀವು ಎಲ್ಲಾ ಸೇರಿ ರೆಗ್ಯುಲರೈಸ್ ಮಾಡಿದ್ದೇವೆ. ನೀವು ಅಪಾಯಿಂಟ್‌ಮೆಂಟ್ ಮಾಡಿದ್ದುವನ್ನು, ನಾವು ರೆಗ್ಯುಲರೈಸ್ ಮಾಡಿದ್ದೇವೆ. ಆದ್ದರಿಂದ ಏನಾಗಿದೆ ಎಂದರೆ 20 ಪರ್ಸೆಂಟ್ ರಿಸರ್ವೇಷನ್ ಅಂದರೂ ಕೂಡ ಸುಮಾರು nearly it comes to ten thousand. Are you going to make special recruirtment, I am asking.

SRI H.D. DEVEGOWDA : That is only confined to a particular category of appointment. It is not going to enroach upon the appointments in other departments.

ಲೆಕ್ಚರರ್ಸ್ ಇರಬಹುದು, ಇಂಜಿನಿಯರ್ಸ್ ಇರಬಹುದು, ವರ್ಗ ಒಂದು ಮತ್ತು ವರ್ಗ ಎರಡು ಇರಬಹುದು ಈ ತರಹದ ಹುದ್ದೆಗಳಿಗೆ ಇದು ಅನ್ವಯವಾಗುವುದಿಲ್ಲ. ಏನು ರಸ್ತೆಯಲ್ಲಿ ದಿನಗೂಲಿ ಕೆಲಸ ಮಾಡುವವರು ಇದ್ದರು ಅಂತಹವರದ್ದು ನಾನು ನೋಡುತ್ತೇನೆ. ಏಕೆಂದರೆ ಅವರಲ್ಲಿ ಯಾವುದೇ ರಿಸರ್ವೇಷನ್ ಇಲ್ಲ, ನೀವು ಕೊಟ್ಟಂತಹ ಸಲಹೆಯನ್ನು ಪುನಃ ಪರಿಶೀಲನೆ ಮಾಡಿ ಎಲ್ಲಿ ಅನ್ಯಾಯವಾಗಿದೆಯೋ ಅಲ್ಲಿ ಅದನ್ನು ಸರಿಪಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯಪಾಲರ ಭಾಷಣದಲ್ಲಿ ಹೇಳಿದ ಹಾಗೆ ಸರ್ಕಾರದಲ್ಲಿ ಖಾಲಿ ಇರತಕ್ಕ ಹುದ್ದೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಇರುವುದು ಪ್ರಾಥಮಿಕ ಶಾಲೆ ಅಧ್ಯಾಪಕರ ಹುದ್ದೆಗಳು. ಈ

ರೀತಿ ಸರ್ಕಾರಿ ಹುದ್ದೆಗಳನ್ನು ಕೊಡಲು, ಉದ್ಯೋಗಾವಕಾಶಗಳನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ತನ್ನ ಸ್ಪಷ್ಟವಾದ ಯೋಜನೆಗಳನ್ನು ಏನು ಇಟ್ಟಿದೆ? ಆದರೆ ಉದ್ಯೋಗವಕಾಶಗಳನ್ನು ಸೃಷ್ಟಿ ಮಾಡುವುದಕ್ಕೆ ಬೇಕಾಗಿರತಕ್ಕಂತಹ ಕೆಲಸ ಯಾವುದು ಸ್ಪಷ್ಟವಾಗಿಲ್ಲ. ಆ ದಿಕ್ಕಿನಲ್ಲಿ ಉದ್ಯೋಗವಕಾಶಗಳನ್ನು ಹೆಚ್ಚು ಮಾಡಬೇಕೇ ಹೊರತು, ನಾನು ರಾಜ್ಯದ ಎಲ್ಲಾ ಕಡೆಗಳಲ್ಲೂ ಯಾವ ಮೋರ್ಚಾದ ಯುವ ಅಧ್ಯಕ್ಷನಾಗಿ ಓಡಾಡಿರುವುದರಿಂದ ಇವತ್ತು ರಾಜ್ಯದಲ್ಲಿ ಯುವಕರು ಸರ್ಕಾರದ ನೀತಿ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಹಾಗಾಗಿ ಯುವಕರಿಗೆ ಉದ್ಯೋಗವಕಾಶಗಳನ್ನು ಹೆಚ್ಚು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಈ ಸರ್ಕಾರೀ ಹುದ್ದೆಗಳನ್ನು ಭರ್ತಿ ಮಾಡುವಂತಹ ವಿಚಾರದಲ್ಲಿ, ತಮಗೆ ಗೊತ್ತಿರಬಹುದು 26ನೇ ತಾರೀಖು ನವೆಂಬರ್ ವಿಧಾನಸಭಾ ಚುನಾವಣೆಯಾದ ಮೇಲೆ ಮತ್ತೆ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾಗುವುದಕ್ಕೆ ಮುಂಚೆ ತಮ್ಮದು ಮತ್ತು ಬೊಮ್ಮಾಯಿ ಅವರದು, ಹೆಗಡೆಯವರು ಪೋಟೋ ಹಾಕಿ ಒಂದು ಲಕ್ಷ ಹುದ್ದೆಗಳನ್ನು ಒಂದು ವರ್ಷದ ಒಳಗೆ ಭರ್ತಿ ಮಾಡುತ್ತೇವೆಂದು ಹೇಳಿದಿರಿ. ಹಂತ ಹಂತವಾಗಿ ಈ ಹುದ್ದೆಗಳನ್ನು ಭರ್ತಿ ಮಾಡಿದರೆ ಸ್ವಲ್ಪ ಜನಗಳಿಗೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿದಂತಾಗುತ್ತದೆ. ಅದಕ್ಕೆ ನಿರ್ದಿಷ್ಟವಾಗಿ ಈ ಖಾಲಿ ಇರುವ ಹುದ್ದೆಗಳನ್ನು ಬರುವ ದಿವಸಗಳಲ್ಲಿ ಭರ್ತಿ ಮಾಡುತ್ತೇವೆಂದು ಹೇಳಲಿಕ್ಕೆ ಸರ್ಕಾರದಿಂದ ಸ್ಪಷ್ಟವಾದ ವಿಚಾರ ಇದೆಯೋ? ಇದಕ್ಕೆ ಸ್ಪಷ್ಟೀಕರಣ ಅವರು ಕೇಳುತ್ತಿದ್ದಾರೆ ಅಷ್ಟೆ.

SRI. H. D. DEVEGOWDA : I want to further make it clear that ಹುದ್ದೆಗಳು ಎಷ್ಟು ಹಾಲಿ ಇದೆ ಎಂದು ಹೇಳಿ, ನಾನು ಚುನಾವಣೆ ಕಾಲದಲ್ಲಿ ನಮಗೆ ಬಂದಂತಹ ವರದಿ ಪ್ರಕಾರ ಒಂದು ಲಕ್ಷ ಹುದ್ದೆಗಳು ಖಾಲಿ ಇವೆ ಎಂದು ತಿಳಿದು ಬಂದಿದೆ. ನಾನು ವಿಧಾನ ಸೌಧದ ಮೆಹಡಿಯಲ್ಲಿ ಕುಳಿತು ವರದಿಗಳನ್ನು ಸಂಗ್ರಹ ಮಾಡುವಷ್ಟು ಶಕ್ತಿ ನನಗೆ ಆಗ ಇರಲಿಲ್ಲ. ನನಗೆ ಬಂದಷ್ಟು ವರದಿಗಳನ್ನು ನಾನು ಕೊಟ್ಟಿದ್ದೇನೆ. ಫೆಬ್ರವರಿ ತಿಂಗಳಲ್ಲಿ ಈ ಆರ್ಡರನ್ನು ಹೊರಡಿಸಿದೆವು, ನೋಟಿಫಿಕೇಷನ್ ತೆಗೆದೆವು, ಅದರ ಉದ್ದೇಶ ಈ ಹುದ್ದೆಗಳನ್ನು ಭರ್ತಿ ಮಾಡಬೇಕೆಂಬುದು. ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಸೋ ಮೋಟೋ ಮಾಡಬೇಕಾದರೆ ಏನಾದರೂ ಮಾಡಬೇಕು. ಖರ್ಗೆಯವರು ಅಷ್ಟೇ ಅಲ್ಲ ನಾಳೆ ಎಲ್ಲರೂ ಕೇಳುತ್ತಾರೆ. ಒಂದು ವರ್ಗಕ್ಕೆ ಅನ್ಯಾಯ ಮಾಡಿದರೆ ಹೇಗೆ ಮಾಡಿದಿರಿ ಎಂದು ಸದನದಲ್ಲಿ ಎಲ್ಲರೂ ಕೇಳುತ್ತಾರೆ. ಇದರ ಬಗ್ಗೆ ನಾವು ಎಚ್ಚರಿಕೆ ವಹಿಸಬೇಕಾಗುತ್ತದೆ. ರೋಸ್ಟರ್ ಬಗ್ಗೆ ಒಂದು ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಿಂದೆ ಇದ್ದ ರೋಸ್ಟರ್‌ನ್ನು ಆವತ್ತಿನ ಪರಿಸ್ಥಿತಿ ಏನು ಇತ್ತು ಅದಕ್ಕೆ ತಕ್ಕಂತೆ ಮೀಸಲಾತಿ ಮಾಡಿದ್ದೆವು. ಈಗ 50 ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿದ ಮೇಲೆ ನಾವು ಅದಕ್ಕೆ ಅನುಗುಣವಾಗಿ ಮಾಡಬೇಕಾಗುತ್ತದೆ. ಅದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ, ಇದನ್ನು ಕುರ್ತಾಗಿ ಮಾಡಿ ಎಂದು ಹೇಳಿದ್ದೇವೆ. ರಿಪೋರ್ಟ್ ಬಂದ ತಕ್ಷಣ ಈ ರೋಸ್ಟರ್ ಸಿಸ್ಟಮ್ ಅನ್ನು ಪುನಃ ಜಾರಿಗೆ ತಂದು ಈ ಹುದ್ದೆಗಳನ್ನು ಆಯ್ಕೆ ಮಾಡುವಾಗ ಹೇಗೆ ವೇಕೆನ್ಸಿಗಳನ್ನು ವಿಂಗಡಿಸಬೇಕು ಎಂಬುದನ್ನು ನಿಗದಿ ಮಾಡಿ ಮೊದಲೇ ಹೇಳಿದ ಹಾಗೆ ಶಿಕ್ಷಣ ಇಲಾಖೆಗೆ ಭರ್ತಿ ಮಾಡತಕ್ಕಂಥಾದ್ದು ವೈದ್ಯಕೀಯ ಇಲಾಖೆಗೆ ಭರ್ತಿ ಮಾಡತಕ್ಕಂಥಾದ್ದು, ಪೊಲೀಸ್ ಇಲಾಖೆ ಈ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥಾದ್ದು ಬಗ್ಗೆ ಸರ್ಕಾರ ಹಿಂದು ಮುಂದೆ ನೋಡುವುದಿಲ್ಲ. ಆದರೆ ನಿಯಮಗಳಿಗೆ ಅನುಗುಣವಾಗಿ ಮಾಡಬೇಕಾಗುತ್ತದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಹುದ್ದೆಗಳನ್ನು ಭರ್ತಿ ಮಾಡತಕ್ಕಂತಹ ವಿಚಾರದಲ್ಲಿ ಮಾನ್ಯ ಖರ್ಗೆಯವರು ಹೇಳಿರುವ ವಿಚಾರವನ್ನು ನಾನು ಒಪ್ಪಿ, ಈ ಸರ್ಕಾರದಿಂದ ಏನು ನಿಯಮಗಳನ್ನು ಕಳುಹಿಸಿದ್ದಾರೆ ಎಂದು ಹೇಳಿದರೆ, ದಿನಗೂಲಿ ನೌಕರರನ್ನು ನೇಮಕ ಮಾಡಿಕೊಳ್ಳುವುದಕ್ಕೆ, ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ನೇಮಕ ಮಾಡುವುದಾಗಲೀ, ಯಾವುದೇ ರೂಪದ ನೇಮಕ ಮಾಡಬೇಕಾದರೂ ಅದರಲ್ಲಿ ರಿಸರ್ವೇಷನ್‌ನ್ನು ಪಾಲಿಸುವ ನಿಯಮ ಇದೆ. ಕೆಲವು ಸ್ಥಳೀಯ ಅಧಿಕಾರಿಗಳು ಅವರಿಗೆ ಬೇಕಾದಾಗ ಮಾಡಿಕೊಂಡು ಸುಮಾರು 60 ಸಾವಿರ ಹುದ್ದೆಗಳು ಭರ್ತಿ ಮಾಡಿದ್ದಾರೆ. ಆದ್ದರಿಂದ ನಾನು ರೋಸ್ಟರ್ ಫಾಲೋ ಮಾಡದೆ ಇರುವುದರಿಂದ ಅದನ್ನು ಪ್ರತ್ಯೇಕವಾಗಿ ಸ್ಪೆಶಿಯಲ್ ರೆಕ್ರೂಟ್ ಮೆಂಟ್ ಮಾಡತಕ್ಕಂಥಾದ್ದನ್ನು ನಾನು ಹೇಳುತ್ತೇನೆ. ಇನ್ನು ಒಂದು ಮುಖ್ಯವಾದ ವಿಚಾರ ಸುಪ್ರೀಂ ಕೋರ್ಟ್ ನವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಭಡ್ತಿ ಕೊಡುವಾಗ ರೋಸ್ಟರನ್ನು ಫಾಲೋ ಮಾಡಬೇಕೆಂದು ಹೇಳಿ ಅದನ್ನು 1997ರವರೆಗೆ....

ಅಧ್ಯಕ್ಷರು : ಬೇರೆ ಪ್ರಶ್ನೆ, ಬಡ್ತಿಗೆ ಇದು ಸಂಬಂಧಪಡುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಬಡ್ತಿ ನೀಡಬೇಕೆಂದು ಇದೆ ಅದನ್ನು ಸರ್ಕಾರ 94ರವರೆಗೆ ಮುಂದುವರೆಸಿತ್ತು 94ರಿಂದ ಇನ್ನು ಮೂರು ವರ್ಷ ಮುಂದುವರೆಸಬೇಕಾಗಿತ್ತು. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಮೂರು ತಿಂಗಳಾದರೂ ಆದೇಶ ಹೊರಡಿಸಿಲ್ಲ. ಅದನ್ನು ಹೊರಡಿಸುತ್ತೀರೋ ಎಂದು ನಾನು ಕೇಳುತ್ತೇನೆ.

ಅಧ್ಯಕ್ಷರು : ಪ್ರತ್ಯೇಕವಾಗಿ ಕೇಳಿ, ಬಡ್ತಿ ಬೇರೆ, ನೇಮಕಾತಿ ಬೇರೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ

166 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರಪಾಲಿಕೆಯ ಅವಧಿಯು ಯಾವಾಗ ಪೂರ್ಣಗೊಳ್ಳುತ್ತದೆ?

ಆ) ಬೆಂಗಳೂರು ಮಹಾನಗರಪಾಲಿಕೆಗೆ ಯಾವಾಗ ಚುನಾವಣೆ ನಡೆಸಲಾಗುವುದು?

ಇ) ಕಳೆದ ನಾಲ್ಕು ವರ್ಷಗಳಿಂದ ಬೆಂಗಳೂರು ಮಹಾನಗರಪಾಲಿಕೆಯು ವಶಪಡಿಸಿಕೊಂಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೊಸ ಬಡಾವಣೆಗಳೆಷ್ಟು?

ಈ) ಈ ಬಡಾವಣೆಗಳಲ್ಲಿರತಕ್ಕ ನಾಗರೀಕರೂ ಮುಂಬರುವ ಮಹಾನಗರಪಾಲಿಕೆಯಲ್ಲಿ ಮತ ನೀಡುವ ಅವಕಾಶವನ್ನು ಕಲ್ಪಿಸಲಾಗುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸ್ವಾಮಿ, 2-5-1995 ರಂದು. (ಎಂಡನೇ ಮೇ ಹತ್ತೊಂಭತ್ತ ನೂರ ತೊಂಭತ್ತೈದನೇ ಇಸವಿ)

ಆ) ಸಂವಿಧಾನ (74ನೇ ತಿದ್ದುಪಡಿ) ಕಾಯ್ದೆ 1992ರ ಅನುಗುಣವಾಗಿ ರಾಜ್ಯದ ಮುನಿಸಿಪಲ್ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ ಮತ್ತು ಈ ತಿದ್ದುಪಡಿ ಕಾಯ್ದೆಯನ್ವಯ ಶಾಸನಬದ್ಧ ಅಗತ್ಯತೆಗಳನ್ನು ಪೂರೈಸಿದ ನಂತರ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಲಾಗುವುದು.

ಇ) 90 (ತೊಂಭತ್ತು)

ಈ) ಹೌದು